ಉತ್ತರ.—ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—(ಅ) ಇಲ್ಲ.

(ಆ) ಮೇಲ್ಕಂಡ (ಅ) ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯನ್ನು ತಮಿಳುನಾಡಿನ ಮಾದರಿಯಲ್ಲಿ ಪ್ರತ್ಯೇಕ ಸ್ವಾಯುಕ್ತ ಪ್ರಾದೇಶಿಕ ಸಂಸ್ಥೆಗಳಾಗಿ ವಿಭಜಿಸುವ ಉದ್ದೇಶ ಸರಕಾರಕ್ಕೆ ಇಲ್ಲ. ಪರ್ಯಾಯವಾಗಿ ರಾಜ್ಯ ಸಾರಿಗೆ ಸಂಸ್ಥೆಯನ್ನು ಐದು ಪ್ರಾದೇಶಿಕ ವಿಭಾಗಗಳಾಗಿ ರಚಿಸಿ ಅವುಗಳಿಗೆ ಒಬ್ಬೊಬ್ಬ ಪ್ರಾದೇಶಿಕ ಅಧಿಕಾರಿಯನ್ನು ನೇಮಿಸಲಾಗಿದೆ. ಸಂಸ್ಥೆಯ ಕಾರ್ಯದಕ್ಷತೆ ಹಾಗೂ ಆರ್ಥಿಕ ಸ್ಥಿತಿಯನ್ನು ವೃದ್ಧಿಗೊಳಿಸುವುದೇ ಈ ವ್ಯವಸ್ಥೆಯ ಉದ್ದೇಶ.

ವಿಷಯ : ಸೇಡಂ ಟೌನಿನಲ್ಲಿ ಬಡ ಹಾಗೂ ಹರಿಜನರಿಗಾಗಿ ಮನೆಗಳ ನಿರ್ಮಾಣ

ಪ್ರಶ್ನೆ 9(10) ಡಾ॥ ನಾಗರೆಡ್ಡಿ ಎಲ್. ಪಾಟೀಲ್ (ಸೇಡಂ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಸೇಡಂ ನಗರದಲ್ಲಿ ಸರ್ವೆ ನಂ. 918 ಮತ್ತು 909ರಲ್ಲಿ 130 ಮನೆಗಳಿಗಾಗಿ 100 ರೂಪಾಯಿ ಹಾಗೂ 300 ಮತ್ತು 1000ವನ್ನು ಮುಂಗಡವಾಗಿ ಹಣ ಕೊಟ್ಟಿದ್ದರೂ ಅಲಾಟ್ ಮಾಡದೆ ಇರಲು ಕಾರಣಗಳೇನು ;

(ಆ) ಮೇಲ್ಕಂಡ ಮನೆಗಳನ್ನು 2 ವರ್ಷಗಳಲ್ಲಿ ಕಟ್ಟಿಕೊಡುವ ಯೋಜನೆ ಇದ್ದಾಗ್ಯೂ ಈವರೆಗೆ 3–4 ವರ್ಷ ಕಳೆದರೂ ಕಟ್ಟಿಕೊಡದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

(ಇ) ಮೇಲ್ಕಾಣಿಸಿದ ಸರ್ವೆ ನಂಬರುಗಳಲ್ಲಿ ಹೆಚ್ಚಿನ ಸಂಖ್ಯೆಗಳಲ್ಲಿ ಬಡಜನ, ಹರಿಜನರಿಗೆ ಇನ್ನೂ ನೂರಾರು ಸಂಖ್ಯೆಗಳಲ್ಲಿ ಮನೆ ಕಟ್ಟಿಕೊಡಲು ಅವಕಾಶವಿದ್ದು ಅದನ್ನು ಸರಕಾರದವರು ಕಟ್ಟಿಕೊಡಲು ತೀವ್ರವಾಗಿ ಕ್ರಮ ತೆಗೆದುಕೊಳ್ಳುವರೆ ?

ಉತ್ತರ.—ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮಂತ್ರಿಗಳು).—

(ಅ) ಕರ್ನಾಟಕ ಗೃಹಮಂಡಳಿಯು ಸೇಡಂ ನಗರದಲ್ಲಿ ಸರ್ವೆ ನಂ. 918, 919 ರಲ್ಲಿ ಮನೆ ಕಟ್ಟುವ ಯೋಜನೆ ಬಗ್ಗೆ ತಾ॥ 23–1–1981 ರಲ್ಲಿ ಬೇಡಿಕೆ ಸಮೀಕ್ಷೆಯನ್ನು ಪ್ರಕಟಿಸಲಾಗಿತ್ತು. ಯೋಜನೆಯನ್ನು ಹುಡ್ಕೋದವರಿಗೆ ಜೂನ್ 1981ರಲ್ಲಿ ಕಳುಹಿಸಲಾಗಿತ್ತು. ಆ ಸಂಸ್ಥೆಯು, ನಿವೇಶನಗಳ ರೂಪುರೇಖೆಯನ್ನು ಮಾರ್ಪಾಡು ಮಾಡಲು ತಿಳಿಸಿದ್ದರಿಂದ, ಆ ಬಗ್ಗೆ ನಗರಯೋಜನಾ ನಿರ್ದೇಶಕರ ಅನುಮತಿ ಪಡೆದು ಯೋಜನೆಯನ್ನು ಪರಿಷ್ಕರಿಸಿ, ಹುಡ್ಕೋಗೆ ಆರ್ಥಿಕ ನೆರವಿನ ಮಂಜೂರಾತಿ ಬಗ್ಗೆ ಕಳುಹಿಸಿಕೊಡಲಾಗಿದೆ. ಮಂಜೂರಾತಿ ಬಂದ ಕೂಡಲೇ ಮನೆಗಳನ್ನು ಹಂಚಲಾಗುವುದು.

(ಆ) ಹುಡ್ಕೋದಿಂದ ಮಂಜೂರಾತಿ ಪಡೆದ ಎರಡು ವರ್ಷಗಳ ಒಳಗೆ ಮನೆಗಳನ್ನು ಕಟ್ಟಿಕೊಡಲಾಗುವುದೆಂದು ಕರ್ನಾಟಕ ಗೃಹನಿರ್ಮಾಣ ಮಂಡಳಿ ತಿಳಿಸಿದೆ.

(ಇ) ಈ ಸರ್ವೆ ನಂಬರುಗಳಲ್ಲಿ ಉಳಿದಿರುವ ಜಾಗ ಕೇವಲ 8 ಎಕರೆ ಪ್ರದೇಶವಿದ್ದು ಇದರಲ್ಲಿ ಈಗಾಗಲೇ 202 ಮನೆಗಳನ್ನು ಕಟ್ಟುವ ಯೋಜನೆಯನ್ನು ತಯಾರಿಸಲಾಗಿದೆ.

ವಿಷಯ : ಮಲ್ಪೆಯ ಸಮುದ್ರ ತೀರದಲ್ಲಿ ವಿಹಾರಧಾಮದ ನಿರ್ಮಾಣ

ಪ್ರಶ್ನೆ 10(28) ಡಾ॥ ವಿ. ಎಸ್. ಆಚಾರ್ಯ (ಉಡುಪಿ).—ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

(ಅ) ಮಲ್ಪೆಯ ಸಮುದ್ರ ತೀರದಲ್ಲಿ ಕಟ್ಟುತ್ತಿರುವ ವಿಹಾರಧಾಮದ ಕಾರ್ಯ ನಿಧಾನವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ವಿಹಾರಧಾಮದ ಅಂದಾಜು ವೆಚ್ಚವೆಷ್ಟು ; ಈಗ ಕಾಮಗಾರಿಯಲ್ಲಿ ಎಷ್ಟು ಪ್ರಗತಿಯಾಗಿದೆ ಮತ್ತು ಹಣ ಎಷ್ಟು ಪಾವತಿ ಆಗಿದೆ ;

(ಇ) ಈ ವಿಹಾರಧಾಮದ ಬಗ್ಗೆ ಮಂಜೂರಾದ ಹಣವನ್ನು ಇತರ ಯೋಜನೆಗಳಿಗೆ ನೀಡಲಾಗಿದೆಯೇ ?

ಉತ್ತರ.—ರಘುಪತಿ (ಪ್ರಚಾರ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

(ಅ) ಬಂದಿದೆ.

(ಆ) 67.00 ಲಕ್ಷ ರೂಪಾಯಿಗಳು.

(ಇ) ಇಲ್ಲ.

ವಿಷಯ : ಶ್ರೀ ಆದಿಚುಂಚನಗಿರಿ ಕ್ಷೇತ್ರವನ್ನು ಪ್ರವಾಸೀ ಕೇಂದ್ರವನ್ನಾಗಿ ಪರಿಗಣಿಸುವುದು.

ಪ್ರಶ್ನೆ 11(25) ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಮಾನ್ಯ ವಾರ್ತಾ ಹಾಗೂ ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿರುವ ಶ್ರೀ ಆದಿಚುಂಚನಗಿರಿ ಕ್ಷೇತ್ರ ಅತ್ಯಂತ ಸುಂದರವಾದ ನಿಸರ್ಗದ ತಾಣವಾಗಿದ್ದು ಸಹಸ್ರಾರು ಜನ ಪ್ರವಾಸಿಗರನ್ನು ಹಾಗೂ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಸದರಿ ಶ್ರೀ ಆದಿಚುಂಚನಗಿರಿ ಕ್ಷೇತ್ರವು ಪ್ರವಾಸೀ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಏರ್ಪಾಡು ಮಾಡುವುದೇ ?

ಉತ್ತರ—ಶ್ರೀ ರಘುಪತಿ (ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು).—

(ಅ) ಹೌದು.

(ಆ) ಹೌದು.

ವಿಷಯ : ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನದ ಮಂಜೂರಾತಿ

ಪ್ರಶ್ನೆ 12(26) ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ಬೀಡಿ ವೆಲ್‌ಫೇರ್ ಫಂಡಿನಿಂದ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವ ಯೋಜನೆ ಜಾರಿಯಲ್ಲಿದೆಯೆ ; ಈ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೊಳಿಸಲು ಇರುವ ಮಾರ್ಗೋಪಾಯ ಯಾವುದು ;

(ಆ) ಈ ಯೋಜನೆಯನ್ವಯ 1981–82 ಮತ್ತು 1982–83ನೇ ವರ್ಷಗಳಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ತಿಳಿಸುವುದು ;

(ಇ) ಈ ಎರಡು ವರ್ಷಗಳಲ್ಲಿ ವಿದ್ಯಾರ್ಥಿ ವೇತನ ನೀಡದೆ ಇದ್ದಲ್ಲಿ ಅದಕ್ಕೆ ಕಾರಣಗಳೇನು ?

ಉತ್ತರ. – ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮಂತ್ರಿಗಳು).—

(ಅ) ಹೌದು. ಭಾರತ ಸರ್ಕಾರದ ಕಾರ್ಮಿಕ ಖಾತೆಯಿಂದ ಅಂಗೀಕೃತವಾದ ಒಂದು ಯೋಜನೆ ಇದೆ. ಇದರ ಅನ್ವಯ 5ನೇ ತರಗತಿಯಿಂದ ಇಂಜಿನಿಯರಿಂಗ್, ವೈದ್ಯಕೀಯ, ಶಿಕ್ಷಣ ಪಡೆಯುತ್ತಿರುವ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಈ ಯೋಜನೆಯು ಕೇಂದ್ರ ಸರಕಾರದ ವೆಲ್‌ಫೇರ್ ಕಮೀಷನರ್ (ದಕ್ಷಿಣ ವಿಭಾಗ) ಬೆಂಗಳೂರು ಇವರಿಂದ ಜಾರಿಗೊಳಿಸಲಾಗುತ್ತದೆ. ವಿದ್ಯಾರ್ಥಿ ವೇತನವನ್ನು ಆಯಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಮುಖಾಂತರ ಹಂಚಲಾಗುತ್ತಿದೆ.

(ಆ) ವಿವರಗಳನ್ನು ಕೆಳಗೆ ಕೊಡಲಾಗಿದೆ.

ಜಿಲ್ಲೆ	ವರ್ಷ	ವಿದ್ಯಾರ್ಥಿಗಳ ಸಂಖ್ಯೆ	ನೀಡಲಾದ ಹಣದ ಮೊತ್ತ
ದಕ್ಷಿಣ ಕನ್ನಡ ಜಿಲ್ಲೆ	81–82	1607	3,18,714–00
ಬೇರೆ ಜಿಲ್ಲೆಗಳು	"	577	1,08,832–50
ದಕ್ಷಿಣ ಕನ್ನಡ ಜಿಲ್ಲೆ	82–83	708	1,28,735–00
ಬೇರೆ ಜಿಲ್ಲೆಗಳು	"	1553	2,81,139–00

(ಇ) "ಆ" ಪ್ರಶ್ನೆಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಶಿಗ್ಗಾಂನಲ್ಲಿ ಮುನಿಸಿಫ್ ನ್ಯಾಯಾಲಯವನ್ನು ತೆರೆಯುವುದು.

ಪ್ರಶ್ನೆ : 14(36) ಶ್ರೀ ಎಂ. ಎಂ. ನಡಾಫ್ (ಶಿಗ್ಗಾಂವ್).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ಶಿಗ್ಗಾಂವ್‌ನಲ್ಲಿ ಮುನಿಸಿಫ್ ನ್ಯಾಯಾಲಯವನ್ನು ತೆರೆಯುವುದಾಗಿ ಸರ್ಕಾರದವರು ಸದನದಲ್ಲಿ ಆಶ್ವಾಸನೆಯನ್ನು ನೀಡಿದ್ದರೆ ;

(ಆ) ಪ್ರತಿ ತಾಲ್ಲೂಕಿನಲ್ಲೂ ಮುನಿಸಿಫ್ ನ್ಯಾಯಾಲಯವನ್ನು ತೆರೆಯುವುದು ಸರ್ಕಾರದವರ